ಓ ಎಸ್ ನಂ. 24/2015

ಡಿ ಡಬ್ಲ್ಯು 3

ದಿನಾಂಕ 24/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ಮತ್ತು 3 ನೇ ವಾದಿಗಳ ಪರಃ ಶ್ರೀ ಪಿ ಆರ್ ಸಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾವು ಖರೀದಿಸಿರುವ ಸ್ವತ್ತನ್ನು ಕೃಷ್ಣಪ್ಪರವರ ಮೊದಲನೇ ಹೆಂಡತಿ ಹನುಮಮ್ಮರವರ ಮಗನಾದ ಚಂದ್ರಪ್ಪರವರಿಂದ ಮಾತ್ರ ಖರೀದಿಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರ ಕುಟುಂಬದಲ್ಲಿ ವಿಭಾಗವಾದ ನಂತರ ಸ್ವತ್ತನ್ನು ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕೃಷ್ಣಪ್ಪ ಮತ್ತು ಅವರ ಮಕ್ಕಳ ನಡುವೆ ಜುಬಾನಿ ಪಾಲು ವಿಭಾಗ ಆಗಿದೆ ಎಂದು ತಿಳಿಸಿದ್ದು ಆ ಬಗ್ಗೆ ದಾಖಲೆಗಳನ್ನು ಒದಗಿಸಿರುತ್ತೇನಾ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಸ್ವತ್ತು ಕೃಷ್ಣಪ್ಪರವರ ಸ್ವಯಾರ್ಜಿತ ಆಸ್ತಿಯಲ್ಲ, ಅದು ಅವರ ತಂದೆ ದಾಸಪ್ಪರವರಿಂದ ಕೃಷ್ಣಪ್ಪರವರಿಗೆ ಬಂದಿದ್ದು, ಸದರಿ ಕೃಷ್ಣಪ್ಪರವರ ಮರಣದ ನಂತರ ಚಂದ್ರಪ್ಪರವರಿಗೆ ಬಂದಿರುತ್ತದೆ ಆ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಆಸ್ತಿಯಲ್ಲಿ ಕೃಷ್ಣಪ್ಪರವರ ಮೊದಲನೇ ಹೆಂಡತಿ ಮಗನಿಗೆ ಎಷ್ಟು

ಹಕ್ಕಿರುತ್ತದೆಯೋ ಅಷ್ಟೇ ಹಕ್ಕು ಕೃಷ್ಣಪ್ಪರವರ ಎರಡನೇ ಹೆಂಡತಿ ಲಕ್ಕಮ್ಮರವರ ಮಕ್ಕಳಿಗೂ ಸಹ ಇರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ, ನಾನು ಆಸ್ತಿಯನ್ನು ಚಂದ್ರಪ್ಪರವರಿಂದ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಸ್ವತ್ತಿನಲ್ಲಿ ಕೃಷ್ಣಪ್ಪರವರ ಎರಡನೇ ಹೆಂಡತಿಯ ಮಕ್ಕಳಿಗೂ ಸಹ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ, ನಾನು ಖರೀದಿಸಿರುವ ಸ್ವತ್ತಿಗೆ ಚಂದ್ರಪ್ಪ, ಅವರ ಹೆಂಡತಿ ಮಕ್ಕಳು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಸ್ವತ್ತಿನಲ್ಲಿ ವಾದಿಗಳಿಗೂ ಸಹ ಸಮಾನ ಹಕ್ಕು ಇರುವುದರಿಂದ ನನಗೆ ಸಂಪೂರ್ಣ ಹಕ್ಕು ಪ್ರಾಪ್ತಿಯಾಗುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.